# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು :** **ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನ ಸಭೆಯಿಂದ ಚುನಾಯಿತರಾದವರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 491**

**ಉತ್ತರಿಸಬೇಕಾದ ದಿನಾಂಕ : 11.03.2025**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೇವಲ ಸಹಕಾರಿ ವಲಯವಲ್ಲದೇ. ಇಡೀ ನಾಡನ್ನೇ ಆತಂಕಕ್ಕೆ ದೂಡಿದ ಮಂಗಳೂರಿನ ಕೋಟೆಕಾರು ಸಹಕಾರಿ ಬ್ಯಾಂಕ್ ದರೋಡೆ ಪ್ರಕರಣದ ಹಿನ್ನೆಲೆಯಲ್ಲಿ ಸಹಕಾರಿ ಬ್ಯಾಂಕ್ ವ್ಯವಸ್ಥೆಯ ಸುರಕ್ಷತೆಯ ಬಗ್ಗೆಯೇ ಸಾರ್ವಜನಿಕರು ಅಪನಂಬಿಕೆಗೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ. ಗ್ರಾಮೀಣ ಆರ್ಥಿಕತೆಯ ಆತ್ಮವಾಗಿರುವ ಸೊಸೈಟಿಗಳು, ಭದ್ರತೆ ಮತ್ತು ಸುರಕ್ಷತೆ ವಿಚಾರದಲ್ಲಿ ನಿರ್ಲಕ್ಷತೆ ಮತ್ತು ಉದಾಸೀನತೆಯನ್ನು ತೋರುತ್ತಾ ಬಂದಿದ್ದು, ಇದನ್ನು ಹೋಗಲಾಡಿಸಲು ಸರ್ಕಾರ ಇದುವರೆಗೆ ತೆಗೆದುಕೊಂಡಿರುವ ಕ್ರಮಗಳೇನು; | ಗ್ರಾಮೀಣ ಆರ್ಥಿಕತೆಯ ಆತ್ಮವಾಗಿರುವ ಸಹಕಾರ ಸಂಘಗಳು/ಬ್ಯಾಂಕುಗಳು ಭದ್ರತೆ ಮತ್ತು ಸುರಕ್ಷತೆ ವಿಚಾರದಲ್ಲಿ ನಿರ್ಲಕ್ಷತೆ ಮತ್ತು ಉದಾಸೀನತೆಯನ್ನು ಹೋಗಲಾಡಿಸಲು ನನ್ನ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಸಭೆಗಳಲ್ಲಿ ನೀಡಿರುವ ಸೂಚನೆಗಳಂತೆ ಸಹಕಾರ ಸಂಘಗಳ ನಿಬಂಧಕರು ದಿನಾಂಕ:27.02.2025ರಂದು ಸುತ್ತೋಲೆ ಹೊರಡಿಸಿ ಸದರಿ ಸುತ್ತೋಲೆಯಲ್ಲಿನ ಅಂಶಗಳ ರೀತ್ಯಾ ಸಹಕಾರ ಸಂಘ/ಬ್ಯಾಂಕುಗಳು ಕಟ್ಟುನಿಟ್ಟಿನ ಕ್ರಮವಹಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ. (**ಸುತ್ತೋಲೆಯನ್ನು ಅನುಬಂಧದಲ್ಲಿ ನೀಡಲಾಗಿದೆ.**). |

| | | |
|---|---|---|
| ಇ) | ಸರ್ಕಾರ ಅಗತ್ಯ ಭದ್ರತಾ ವ್ಯವಸ್ಥೆಯನ್ನು ಇದುವರೆಗೂ ಕಲ್ಪಿಸದಿರುವ ಕಾರಣ ಗಳೇನು; | ಸಹಕಾರ ಸಂಘ/ಬ್ಯಾಂಕುಗಳು ಸ್ವಾಯತ್ತ ಸಂಸ್ಥೆಗಳಾಗಿದ್ದು, ಸಂಘದಲ್ಲಿರುವ ಆಭರಣ ಹಾಗೂ ನಗದಿನ ಸುರಕ್ಷತೆಗೆ ಆಯಾಯ ಸಹಕಾರ ಸಂಘಗಳು, ಸರ್ಕಾರ ಸಹಕಾರ ಇಲಾಖೆ ಹಾಗೂ ಪೊಲೀಸ್ ಇಲಾಖೆ ಸೂಚಿಸಿರುವ ಭದ್ರತಾ ವ್ಯವಸ್ಥೆಗಳನ್ನು ಮಾಡಿಕೊಂಡು ಗ್ರಾಹಕರ/ಸದಸ್ಯರ ಹಿತವನ್ನು ಕಾಪಾಡಿಕೊಳ್ಳತಕ್ಕದ್ದಾಗಿರುತ್ತದೆ. |
| ಈ) | ಯಾವ ಕಾಲಮಿತಿಯೊಳಗೆ ಸಹಕಾರಿ ಬ್ಯಾಂಕ್ ವ್ಯವಸ್ಥೆಗೆ ಭದ್ರತೆ ಹೆಚ್ಚಿಸಿ ಕೊಳ್ಳಲು ಬೇಕಾದ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲು ಅಗತ್ಯ ಕ್ರಮ ವಹಿಸ ಲಾಗುವುದು? | ಸಹಕಾರಿ ಬ್ಯಾಂಕ್ ವ್ಯವಸ್ಥೆಗೆ ಭದ್ರತೆ ಹೆಚ್ಚಿಸಿ ಕೊಳ್ಳಲು ನನ್ನ ಅಧ್ಯಕ್ಷತೆಯಲ್ಲಿ ನಡೆದ ಹಲವಾರು ಸಭೆಗಳಲ್ಲಿ ಆಗಿಂದಾಗ್ಗೆ ಸೂಚನೆಗಳು ನೀಡಲಾಗಿರುತ್ತದೆ. ಈ ಸಂಬಂಧ ದಿನಾಂಕ:27.02.2025 ರಂದು ಸಹಕಾರ ಸಂಘಗಳ ನಿಬಂಧಕರು ಸುತ್ತೋಲೆ ಹೊರಡಿಸಿ ಸಹಕಾರಿ ಬ್ಯಾಂಕ್ ವ್ಯವಸ್ಥೆಗೆ ಭದ್ರತೆ ಹೆಚ್ಚಿಸಿಕೊಳ್ಳಲು ಎಲ್ಲಾ ಬ್ಯಾಂಕುಗಳಿಗೂ ನಿರ್ದೇಶನ ನೀಡಲಾಗಿರುತ್ತದೆ. |

**ಸಂಖ್ಯೆ: ಸಿಒ 38 ಸಿಸಿಬಿ 2025**

K. N. Rajanna

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು

ಅನುಬಂಧ

ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)
ಸಹಕಾರ ಸಂಘಗಳ ನಿಬಂಧಕರಕಛೇರಿ, ಕರ್ನಾಟಕರಾಜ್ಯ, ನಂ.1, ಆಲಿಅಸ್ಕರ್‌ರಸ್ತೆ, ಬೆಂಗಳೂರು-52

ನಂ:ಆರ್‌ಸಿಎಸ್/ಸಿಆರ್‌ಡಿ/ಕೆಎಂಸಿ-1/155/2024-25 ದಿನಾಂಕ:27.02.2025

'ಸುತ್ತೋಲೆ'

ವಿಷಯ: ರಾಜ್ಯದಲ್ಲಿರುವ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು /ಎಲ್ಲಾ ಬ್ಯಾಂಕುಗಳು ಅಗತ್ಯ ಭದ್ರತಾ ವ್ಯವಸ್ಥೆ ಅಳವಡಿಸಿಕೊಳ್ಳುವ ಬಗ್ಗೆ.

*****

ರಾಜ್ಯದಲ್ಲಿರುವಎಲ್ಲಾ ಸಹಕಾರಿ ಸಂಸ್ಥೆಗಳು/ಬ್ಯಾಂಕುಗಳು ಅಗತ್ಯ ಭದ್ರತಾ ವ್ಯವಸ್ಥೆಯನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕಿರುತ್ತದೆ. ಆದರೆ, ಹಲವಾರು ಸಹಕಾರ ಬ್ಯಾಂಕುಗಳು ಮತ್ತು ಪತ್ತಿನ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಸಂಘಗಳು ಅಗತ್ಯ ಭದ್ರತಾ ವ್ಯವಸ್ಥೆಗಳನ್ನುಏರ್ಪಡಿಸಿಕೊಳ್ಳದೇ ಇರುವುದರಿಂದ ಅಮೂಲ್ಯವಾದ ಆಭರಣಗಳನ್ನು ಮತ್ತು ನಗದನ್ನು ರಕ್ಷಿಸಿಕೊಳ್ಳುವಲ್ಲಿ ಹಾಗೂ ಇವುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆ ಸಾಗಿಸುವಾಗ ಅಗತ್ಯ ಭದ್ರತೆಯನ್ನು ಪಾಲಿಸದೆ ಮತ್ತು ವಿಮೆಗಳನ್ನು ಮಾಡಿಸದೆ ನಿರ್ವಹಣೆ ಮಾಡುತ್ತಿರುವುದರಿಂದ ದರೋಡೆ ಮತ್ತು ಕಳ್ಳತನ ಪ್ರಕರಣಗಳು ನಡೆದುಅಮಾಯಕ ಸದಸ್ಯರ ಠೇವಣಿ ಮತ್ತು ಆಭರಣಗಳಿಗೆ ಸೂಕ್ತ ಭದ್ರತೆ ಇಲ್ಲದಂತಾಗಿರುತ್ತದೆ. ಇದರಿಂದ ಸಹಕಾರ ಬ್ಯಾಂಕುಗಳ ಮತ್ತು ಸಹಕಾರ ಸಂಘಗಳ ಮೇಲೆ ಸಾರ್ವಜನಿಕರಿಗೆ ಅನುಮಾನಾಸ್ಪದ ಉಂಟಾಗುತ್ತದೆ ಹಾಗೂ ಈ ರೀತಿ ಅಗತ್ಯ ಭದ್ರತೆ ಮತ್ತು ವಿಮೆಗಳನ್ನು ನಿರ್ವಹಿಸದೆ ಅಹಿತಕರ ಘಟನೆಗಳು ಮೇಲಿಂದ ಮೇಲೆ ಜರುಗುತ್ತಿವೆ.

ಇತ್ತೀಚೆಗೆ ಮಂಗಳೂರು ತಾಲೂಕು ಕೋಟೆಕಾರು ವ್ಯವಸಾಯ ಸೇವಾ ಸಹಕಾರ ಸಂಘ ನಿ., ಇದರ ಕೆ.ಸಿ.ರೋಡ್‌ನ ಶಾಖೆಯಲ್ಲಿ ದಿನಾಂಕ:17.01.2025ರಂದು ಸುಮಾರು ಮಧ್ಯಾಹ್ನ 1.00 ಗಂಟೆಯ ಸಮಯದಲ್ಲಿ ಐದು ಜನ ಅಪರಿಚಿತ ಮುಸುಕುದಾರಿಗಳು ಪಿಸ್ತೂಲ್ ಮತ್ತು ಮಚ್ಚು ಹಿಡಿದು ಶಾಖೆಯ ಒಳನುಗ್ಗಿ ಸಿಬ್ಬಂದಿ ಮತ್ತು ಗ್ರಾಹಕರನ್ನು ಬೆದರಿಸಿ ಶಾಖೆಯ ಭದ್ರತಾ ಕೊಠಡಿಯ ಬೀಗವನ್ನು ಬಲವಂತವಾಗಿ ತೆಗೆಯಿಸಿ ಗ್ರಾಹಕರು ಅಡಮಾನವಿರಿಸಿದ ಬಂಗಾರ ಆಭರಣಗಳು ಹಾಗೂ ವಹಿವಾಟಿನ ನಗದನ್ನು ದೋಚಿಕೊಂಡು ತೆರಳಿರುವ ಬಗ್ಗೆ ಇಲಾಖೆಯ ಗಮನಕ್ಕೆ ಬಂದಹಿನ್ನೆಲೆಯಲ್ಲಿರಾಜ್ಯದಲ್ಲಿರುವಎಲ್ಲಾ ಸಹಕಾರಿ ಸಂಸ್ಥೆಗಳು/ಬ್ಯಾಂಕುಗಳು ಸುರಕ್ಷತೆ ಮತ್ತು ಭದ್ರತೆಯ ಹಿತದೃಷ್ಟಿಯಿಂದ ಚಾಚೂ ತಪ್ಪದೆಕೆಳಕಂಡಂತೆ ಅಗತ್ಯ ಭದ್ರತಾ ವ್ಯವಸ್ಥೆ ಅಳವಡಿಸಿಕೊಳ್ಳುವುದು ಅಗತ್ಯವೆಂದು ಪೊಲೀಸ್ ಆಯುಕ್ತರು, ಮಂಗಳೂರು ನಗರ, ಮಂಗಳೂರು ಇವರ ಅಧ್ಯಕ್ಷತೆಯಲ್ಲಿ ಹಾಗೂ ಸಹಕಾರ ಇಲಾಖಾ ಸಹಯೋಗದೊಂದಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಹಾಗೂ ಇತರೆ ಎಲ್ಲಾ ರೀತಿಯ ಸಹಕಾರ ಸಂಘ/ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಸಭೆಯನ್ನು ದಿನಾಂಕ:04-02-2025 ರಂದು ನಡೆಸಿ ಸೊಸೈಟಿಗಳ ಸುರಕ್ಷತೆ ಮತ್ತು ಭದ್ರತೆದೃಷ್ಟಿಯಿಂದ

ಅಳವಡಿಸಿಕೊಳ್ಳಬೇಕಾದ ಸೌಕರ್ಯ ಮತ್ತು ಇನ್ನಿತರೆ ಸುರಕ್ಷತೆಗಳ ಕುರಿತು ನಡವಳಿ ಮಾಡಿ ತೀರ್ಮಾನಿಸಲಾಗಿರುತ್ತದೆ. ಸಹಕಾರ ಬ್ಯಾಂಕುಗಳು/ಸಹಕಾರ ಸಂಘಗಳು ಅವು ನಿರ್ವಹಿಸುವ ವ್ಯವಹಾರಗಳ ಭದ್ರತಾದೃಷ್ಟಿಯಿಂದ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಲು ಸೂಚಿಸಲಾಗಿದೆ.

1. ಸಂಘದಲ್ಲಿ ಹೊಸ ತಂತ್ರಜ್ಞಾನವುಳ್ಳ ಸಿ.ಸಿ.ಟಿವಿ ಕ್ಯಾಮರ ಅಳವಡಿಕೆ ಹಾಗೂ 24 ಗಂಟೆಗಳ ಕಾಲ ಚಾಲ್ತಿಯಿರುವಬಗ್ಗೆ ಮುನ್ನೆಚ್ಚರಿಕೆ ವಹಿಸುವುದು.
2. ಉತ್ತಮಗುಣಮಟ್ಟದಅಲರಾಮ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು.
3. ಸಂಘದಲ್ಲಿ ಭದ್ರತಾ ಸಿಬ್ಬಂದಿಗಳನ್ನು ನಿಯಮಾನುಸಾರ ನೇಮಕ ಮಾಡಿಕೊಳ್ಳುವುದು.
4. ತುರ್ತು ಸಂದರ್ಭಗಳಲ್ಲಿ ಪೊಲೀಸ್‌ಕಂಟ್ರೋಲ್‌ರೂಮ್‌ಗೆಕರೆ ಮಾಡಿ ತಿಳಿಸುವುದು.
5. ಬೈಲಾದಲ್ಲಿರುವಂತೆ ಮಿತಿಗಿಂತ ಹೆಚ್ಚಿನ ನಗದನ್ನು ಇರಿಸಿಕೊಳ್ಳದಂತೆ ಕ್ರಮವಹಿಸುವುದು.
6. ಸಂಘಕ್ಕೆ ಭೇಟಿ ನೀಡುವ ಸದಸ್ಯರು / ಗ್ರಾಹಕರ ಬಗ್ಗೆ ಗಮನವಿರಿಸಿ, ಅನುಮಾನಸ್ಪದ ವ್ಯಕ್ತಿಗಳ / ಅಪರಿಚಿತ ವ್ಯಕ್ತಿಗಳನ್ನು ಭದ್ರತಾದೃಷ್ಟಿಯಿಂದಚೆಕ್ ಮಾಡುವುದು.
7. ಒತ್ತೆ ಇಡುವ ಬೆಲೆಬಾಳುವ ಆಭರಣ ವಿಮೆ ಮಾಡಿಸುವುದು.
8. ಸೈಬರ್‌ಕ್ರೈಂ ಬಗ್ಗೆ ಜಾಗೃತಿ ಮೂಡಿಸುವುದು.
9. ಮೆಷಿನ್ /ಕಂಪ್ಯೂಟರ್ ಬಳಕೆಯ ಮೂಲಕ ಆಭರಣಗಳ ನೈಜತೆಪರಿಶೀಲನೆ ಮಾಡುವುದು.
10. ಸಂಘವು ನಿರ್ವಹಿಸುತ್ತಿರುವಕೈನಗದು ಶಿಲ್ಕು ಮತ್ತು ದಿನದಅಂತ್ಯಕ್ಕೆ ಉಳಿಯುವ ನಗದು ಶಿಲ್ಕಿಗೆ ಮತ್ತು ಸಾಗಾಟ ಮಾಡುವ ನಗದು ಮೊತ್ತಕ್ಕೆ ವಿಮೆಗಳನ್ನು ಮಾಡಿಸತಕ್ಕದ್ದು.
11. ಸಂಘದಕಟ್ಟಡಕ್ಕೆ ಮತ್ತು ಸಂಘದಲ್ಲಿರುವ ಭದ್ರತಾ ಕೊಠಡಿಗಳಿಗೆ (ನಗದು ಮತ್ತು ಆಭರಣಗಳನ್ನು ನಿರ್ವಹಿಸುವ) ವಿಮೆ ಮಾಡಿಸತಕ್ಕದ್ದು.
12. ಕಟ್ಟಡಕ್ಕೆ ಬೆಂಕಿ ಬಿದ್ದಲ್ಲಿಅಥವಾಯಾವುದೇಅಮೂಲ್ಯ ಚರಾಸ್ತಿಗಳನ್ನು ಸಾಗಾಟ ಮಾಡುವಾಗ ನಡೆಯುವಕಳ್ಳತನ/ದರೋಡೆಯಿಂದಉಂಟಾಗುವ ನಷ್ಟಕ್ಕೆ ಸೇರಿದಂತೆ ವಿಮೆಗಳನ್ನು ಮಾಡಿಸತಕ್ಕದ್ದು.

ಮೇಲ್ಕಂಡಂತೆ ಸೂಚನೆಗಳನ್ನು ಚಾಚೂ ತಪ್ಪದೇಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದೆ. ಇದೇ ರೀತಿಯಾಗಿ ಪ್ರಾಂತದ ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳಿಗೂ ಸಹ ಭದ್ರತೆಯ ದೃಷ್ಟಿಯಿಂದ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ನಿರ್ದೇಶಿಸಲಾಗಿದೆ. ಮೇಲಿನ ಭದ್ರತೆಯ ಅಂಶಗಳನ್ನು ಅಳವಡಿಸಿಕೊಳ್ಳದೇ ಇದ್ದಲ್ಲಿಅಂತಹ ಸಹಕಾರ ಬ್ಯಾಂಕು/ಸಹಕಾರ ಸಂಘಗಳಲ್ಲಿ ನಡೆಯುವಅಹಿತಕರ ಘಟನೆಗಳಿಗೆ ಮತ್ತು ಆ ಘಟನೆಗಳಿಂದ ಉಂಟಾಗುವಚರ ಮತ್ತು ಸ್ಥಿರಾಸ್ತಿ ನಷ್ಟಕ್ಕೆ ಆಯಾ ಬ್ಯಾಂಕಿನ/ಸಹಕಾರ ಸಂಘಗಳ ಆಡಳಿತ ಮಂಡಳಿ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ನೇರ ಹೊಣೆಗಾರರಾಗಿರುತ್ತಾರೆ.

ಕರ್ನಾಟಕ ರಾಜ್ಯ ಸಹಕಾರಿಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು ಮತ್ತು ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತುಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಬೆಂಗಳೂರು ಇವರ ಅಧೀನಕ್ಕೆ ಬರುವ ಬ್ಯಾಂಕುಗಳು ಮತ್ತು ಕೃಷಿ ಪತ್ತಿನ ಸಹಕಾರ ಸಂಘಗಳ ಸಂಬಂಧ ಭದ್ರತಾ ವ್ಯವಸ್ಥೆಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಆಗಿಂದಾಗ್ಗೆ ಪರಿಶೀಲಿಸುವ ಹೊಣೆಗಾರಿಕೆ ಹೊಂದಿರುತ್ತಾರೆ.

ಈ ಸುತ್ತೋಲೆಯ ಅಂಶಗಳನ್ನು ಸಹಕಾರ ಬ್ಯಾಂಕು/ಸಹಕಾರ ಸಂಘಗಳು ಅಳವಡಿಸಿಕೊಂಡಿರುವ / ಅಳವಡಿಸಿಕೊಳ್ಳದಿರುವ ಬಗ್ಗೆ ಕಾರ್ಯವ್ಯಾಪ್ತಿಯಲ್ಲಿನ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಮತ್ತು ಜಿಲ್ಲಾ ಉಪನಿಬಂಧಕರುಗಳು ಮತ್ತುಜಿಲ್ಲಾಕೇಂದ್ರ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಭೇಟಿ ನೀಡಿದಾಗ ಈ ಅಂಶಗಳನ್ನು ಪರಿಶೀಲಿಸಿ ಹೊಣೆಗಾರಿಕೆ ನಿಗಧಿಪಡಿಸಲು ಜವಾಬ್ದಾರಿ ನಿಗಧಿಪಡಿಸಿದೆ.

ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

ಇವರಿಗೆ,

1. ರಾಜ್ಯದಲ್ಲಿರುವ ಎಲ್ಲಾ ಸಹಕಾರಿ ಸಂಸ್ಥೆಗಳು/ಬ್ಯಾಂಕುಗಳಿಗೆ-ಆಯಾ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು ಪ್ರತಿಯನ್ನು ಜಾರಿ ಮಾಡಿ ಸ್ವೀಕೃತಿಯನ್ನು ನಿರ್ವಹಿಸತಕ್ಕದ್ದು.
2. ರಾಜ್ಯದಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರುಗಳಿಗೆ.
3. ರಾಜ್ಯದ ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರುಗಳಿಗೆ.
4. ರಾಜ್ಯದ ಎಲ್ಲಾ ಉಪ ವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ.
5. ರಾಜ್ಯದ ಎಲ್ಲಾ ಜಿಲ್ಲಾಕೇಂದ್ರ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಬೆಂಗಳೂರು.
8. ಆದೇಶ ಕಡತಕ್ಕೆ.